**ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .**

**ಸಿ.ಸಿ.ನಂ. 1133/2018**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹೇಶ |
| ತಂದೆಯ ಹೆಸರು | : | ನಂಜಪ್ಪ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹುಲ್ಲಹಳ್ಳಿ, ನಂಜನಗೂಡು ತಾ. |

**ಸಾಕ್ಷಿಯನ್ನು ದಿನಾಂಕಃ 10.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನ್ಯಾಯಾಲಯದಲ್ಲಿರುವ ಆರೋಪಿ ನಮ್ಮ ಗ್ರಾಮದವರು. ಚಾಸಾ-1 ನನಗೆ ಪರಿಚಯವಿರುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲ. ಚಾಸಾ-1 ನನಗೆ ಯಾವುದೇ ವಿಚಾರ ತಿಳಿಸಿಲ್ಲ, ನಾನು ಅವರನ್ನು ವಿಚಾರಿಸಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀಸವಾಲುಃ ಸ.ಸ.ಅ ರವರಿಂದಃ**

ದಿನಾಂಕ 04.09.2017 ರಂದು ನಾನು ಮನೆಯಲ್ಲಿರುವಾಗ ಚಾಸಾ-1ರವರು ನಮ್ಮ ಮನೆಗೆ ಬಂದಾಗ ಗಲಾಟೆ ಬಗ್ಗೆ ವಿಚಾರಿಸಿದಾಗ ಅವರು ದಿನಾಂಕ 03.09.2017 ರಂದು ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಸರ್ವೆ ನಂ. 30/3 ರ ಗದ್ದೆ ಜಮೀನಿನಲ್ಲಿ ಕೆಲಸ ಮಾಡುವಾಗ ಆರೋಪಿಗಳು ಗದ್ದೆ ನೀರು ಹಾಯಿಸುವ ಸಲುವಾಗಿ ಚಾಸಾ-1ರವರ ಗದ್ದೆಯ

ಮೇಲೆ ಪೈಪ್ ಮೂಲಕ ನೀರು ತೆಗೆದುಕೊಂಡಿದ್ದು, ಆ ಪೈಪ್ ಲೀಕ್ ಆಗಿ ಚಾಸಾ-1ರವರ ಗದ್ದೆಗೆ ನೀರು ತುಂಬಿಕೊಂಡು ಜಮೀನಿನಲ್ಲಿ ಬೆಳೆದಿದ್ದ ಮುಸುಕಿನ ಜೋಳದ ಬೆಳೆಗೆ ತೊಂದರೆಯಾಗಿದ್ದ ಕಾರಣ ಚಾಸಾ-1ರವರು ಆರೋಪಿಗಳನ್ನು ಕೇಳಿದ್ದಕ್ಕೆ ಆರೋಪಿಗಳು ಚಾಸಾ-1ರವರ ಮೇಲೆ ಗಲಾಟೆ ಮಾಡಿ ಬೋಳಿಮಗನೆ ಎಂದು ಬೈದು, ಚಾಸಾ-1ರವರಿಗೆ ಹಲ್ಲೆ ಮಾಡಿ, ಕೊಲೆ ಮಾಡುತ್ತೇವೆಂದು ಹೇಳಿರುತ್ತಾರೆಂದು ನನಗೆ ತಿಳಿಸಿರುತ್ತಾರೆಂದರೆ ಸರಿಯಲ್ಲ. ನಂತರ ನಾನು ಗಲಾಟೆ ಬಗ್ಗೆ ತೀರ್ಮಾನ ಮಾಡಲು ಆರೋಪಿಗಳನ್ನು ಕರೆದಾಗ ಅವರು ಪಂಚಾಯಿತಿಗೆ ಬಂದಿರುವುದಿಲ್ಲ ಎಂದರೆ ನಾನು ಯಾರನ್ನೂ ಕರೆದಿರುವುದಿಲ್ಲ. ಈಗ ನನಗೆ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಸದರಿ ಹೇಳಿಕೆಯನ್ನು ಅಲ್ಲಗಳೆದಿದ್ದರಿಂದ ಕೆಂಪು ಶಾಹಿಯಿಂದ ಗುರುತಿಸಲಾದ ಸದರಿ ಹೇಳಿಕೆಯ ಭಾಗವನ್ನು **ನಿ.ಪಿ-6** ಎಂದು ಗುರುತಿಸಲಾಯಿತು. ಗಲಾಟೆಯ ಬಗ್ಗೆ ಚಾಸಾ-1ರವರು ನನಗೆ ವಿಷಯ ತಿಳಿಸಿದ್ದರೂ ಕೂಡ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲುಃ** ಆರೋಪಿಗಳ ಪರ ವಕೀಲರಿಂದಃ ಏನೂ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**